# ಪ್ರಜಾವಾಣಿ

Saturday, February 6th, 2010

## ‘ದುಂದುವೆಚ್ಚ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೂಲ್ಯವಾದ ಸಮಯವನ್ನು ಸದುಪಯೋಗ ಪಡಿಸಿಕೊಂಡಾಗ ಮಾತ್ರ ಜೀವನದಲ್ಲಿ ಗುರಿ ತಲುಪಲು ಸಾಧ್ಯ ಎಂದು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎನ್.ಪ್ರಭುದೇವ್ ತಿಳಿಸಿದರು.

ಭಾರತೀಯ ಸಾಂಸ್ಕೃತಿಕ ಸಂಬಂಧ ಪರಿಷತ್ತು (ಐಸಿಸಿಆರ್) ಚೌಡಯ್ಯ ಸ್ಮಾರಕ ಭವನದಲ್ಲಿ ಶುಕ್ರವಾರ ಏರ್ಪಡಿಸಿದ್ದ ‘ಅಂತರರಾಷ್ಟ್ರೀಯ ವಿದ್ಯಾರ್ಥಿ ದಿನ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಣವನ್ನು ದುಂದುವೆಚ್ಚ ಮಾಡದೇ ಅಗತ್ಯ ಇರುವುದಕ್ಕೆ ಮಾತ್ರ ಮಿತವಾಗಿ ಬಳಸುವಂತೆ ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪಿ.ಜಿ. ಚಂಗಪ್ಪ, ಮಾತನಾಡಿ, 1939ರಲ್ಲಿ ವಿದ್ಯಾರ್ಥಿಯೊಬ್ಬನನ್ನು ನಾಜಿಗಳು ಕೊಂದರು. ಆ ವಿದ್ಯಾರ್ಥಿಯ ಸ್ಮರಣಾರ್ಥ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ದಿನ ಆಚರಿಸಲಾಗುತ್ತಿದೆ ಎಂದು ಹೇಳಿದರು. ಜೈನ್ ಸಂಸ್ಥೆಗಳ ಸಮೂಹದ ಅಧ್ಯಕ್ಷ ಡಾ. ಆರ್.ಚೆನ್‌ರಾಜ್ ಜೈನ್ ಮಾತನಾಡಿ, ಮಾಹಿತಿ ತಂತ್ರಜ್ಞಾನ ವಿಶ್ವದ ಎಲ್ಲ ಗಡಿಗಳನ್ನು ಮುರಿದು ಹಾಕಿದೆ. ಇದರಿಂದ ವಿಶ್ವವೇ ಒಂದು ಗ್ರಾಮವಾಗಿ ಪರಿವರ್ತನೆಯಾಗಿದೆ. ಹೀಗಿರುವಾಗ ಯುವ ಶಕ್ತಿ ಸಮಯ ವ್ಯಯ ಮಾಡದೇ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕಾದ ಅಗತ್ಯತೆ ಇದೆ ಎಂದು ಹೇಳಿದರು.

ಐಸಿಸಿಆರ್ ಪ್ರಾದೇಶಿಕ ನಿರ್ದೇಶಕಿ ಸರಳಾ ಉನ್ನಿಕೃಷ್ಣನ್, ಎಫ್ಐಎಸ್ಎ-ಬಿ ಅಧ್ಯಕ್ಷ ಎಚ್.ಕೇಡರ್ ಉಪಸ್ಥಿತರಿದ್ದರು. ಭಾರತ, ರುವಾಂಡಾ, ನೇಪಾಳ, ದಕ್ಷಿಣ ಆಫ್ರಿಕಾ, ಶ್ರೀಲಂಕಾ, ಪ್ಯಾಲೆಸ್ಟೈನ್, ಫಿಜಿ, ಐವರಿ ಕೋಸ್ಟ್, ಇರಾನ್, ಅಫ್ಘಾನಿಸ್ತಾನ, ಮಂಗೋಲಿಯಾ, ಕಾಂಗೊ, ಥಾಯ್ಲೆಂಡ್‌ನ ವಿದ್ಯಾರ್ಥಿಗಳು ನೃತ್ಯ ಪ್ರದರ್ಶಿಸಿದರು.



ಭಾರತೀಯ ಸಾಂಸ್ಕೃತಿಕ ಸಂಬಂಧ ಪರಿಷತ್ತು (ಐಸಿಸಿಆರ್) ಚೌಡಯ್ಯ ಸ್ಮಾರಕ ಭವನದಲ್ಲಿ ಶುಕ್ರವಾರ ಏರ್ಪಡಿಸಿದ್ದ ‘ಅಂತರರಾಷ್ಟ್ರೀಯ ವಿದ್ಯಾರ್ಥಿ ದಿನ’ ಕಾರ್ಯಕ್ರಮದಲ್ಲಿ ವಿದೇಶಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.